ಬೈಂದೂರು ವಿಧಾನ ಸಭಾ ಕ್ಷೇತ್ರದಲ್ಲಿ ಅಗ್ನಿಶಾಮಕ ಸ್ಥಾಪನೆ

790(879) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೈಂದೂರು ವಿಧಾನಸಭಾ ಕ್ಷೇತ್ರಕ್ಕೆ ಅಗ್ನಿಶಾಮಕ ಕೇಂದ್ರದ ಅಗತ್ಯತೆಯಿದ್ದು ಇದನ್ನು ಸ್ಥಾಪಿಸಲಾಗುವುದೇ;

ಆ) ಸ್ಥಾಪಿಸುವ ವಿಚಾರ ಪರಿಶೀಲನೆಯಲ್ಲಿದ್ದರೆ ಯಾವಾಗ ಸ್ಥಾಪಿಸಲಾಗುವುದು; ಇಲ್ಲದಿದ್ದಲ್ಲಿ ಕಾರಣಗಳನ್ನು ನೀಡುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಅ) ಬೈಂದೂರು ಹಾಗೂ ಸುತ್ತಮುತ್ತಲು ಸಂಭವಿಸುವ ಅಗ್ನಿ ಕೆರೆಗಳಿಗೆ ಭಟ್ಕಳ (18 ಕಿ.ಮಿ. ದೂರ ಹಾಗೂ ಕುಂದಾಪುರ (30 ಕಿ.ಮಿ.ದೂರ) ಅಗ್ನಿಶಾಮಕ ಠಾಣೆಗಳಿಂದ ವಾಹನಗಳನ್ನು ಕಳುಹಿಸಲಾಗುತ್ತಿದ್ದು, ಸದ್ಯಕ್ಕೆ ಬೈಂದೂರುನಲ್ಲಿ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸುವ ಅವಶ್ಯಕತೆ ಇಲ್ಲ. ಈಗಾಗಲೇ ಸರ್ಕಾರದಿಂದ ಮಂಜೂರಾಗಿದ್ದು ಪ್ರಾರಂಭವಾಗದೇ ಇರುವ 31 ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭ ಮಾಡಿದ ನಂತರ ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸುವ ಬಗ್ಗೆ ಅವಶ್ಯಕತೆ ಕಂಡು ಬಂದಲ್ಲಿ ಪರಿಗಣಿಸಲಾಗುವುದು.

ಗೃಹ ರಕ್ಷಕರಿಗೆ ನೀಡುವ ಗೌರವ ಧನ

791(881) ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು) ಮಾನ್ಯ ಬಂದಿಖಾನೆ, ಗೃಹರಕ್ಷಕ ದಳ, ನಾಗರೀಕ ರಕ್ಷಣೆ ಮತ್ತು ಕಾನೂನು ಮಾಪನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗೃಹ ರಕ್ಷಕರಿಗೆ ನೀಡುವ ಗೌರವ ಧನ ಎಷ್ಟು ;

ಆ) ಇದು ಅವರ ಜೀವನಕ್ಕೆ ಸಾಕಾಗುವುದೇ;

ಇ) ಈ ಗೌರವ ಧನವನ್ನು ಹೆಚ್ಚಿಸಬಹುದೇ?

ಶ್ರೀ ರಾಜ ಅಮರೇಶ್ವರ ನಾಯಕ್ (ಬಂದಿಖಾನೆ, ವೃಹರಕ್ಷಕ ದಳ, ನಾಗರೀಕ ರಕ್ಷಣೆ ಮತ್ತು ಕಾನೂನು ಮಾಪನ ಸಚಿವರು)

ಅ) ರಾಜ್ಯದಲ್ಲಿ ಗೃಹರಕ್ಷಕ ಸ್ವಯಂ ಸೇವಕರುಗಳನ್ನು ಕರ್ತವ್ಯ ಮತ್ತು ತರಬೇತಿಗಳಿಗೆ ಕರೆದಾಗ ದಿನವೊಂದಕ್ಕೆ ರೂ. 70-00ನ್ನು ಕರ್ತವ್ಯ ತರಬೇತಿ ಭತ್ಯೆಯ ರೂಪದಲ್ಲಿ ನೀಡಲಾಗುತ್ತಿದೆ.

ಆ) ಗೃಹ ರಕ್ಷಕರು ಸ್ವಯಂ ಸೇವಕರು ಜೀವನದ ದಾರಿಯಲ್ಲಿ ಸಹಜವಾಗಿ ತಮ್ಮದೇ ಆದ ಉದ್ಯೋಗ ವೃತ್ತಿಯನ್ನು ಹೊಂದಿರುತ್ತಾರೆ. ಗೃಹರಕ್ಷಕರಾಗಿ ಅವರು ಸರ್ಕಾರದ ಪರವಾಗಿ ನೀಡುವ ಸೇವಾ ಅವಧಿಯಲ್ಲಿ ಹಾಗೂ ತರಬೇತಿಯ ಅವಧಿಯಲ್ಲಿ ಅವರು ತಮ್ಮ ಸ್ವಂತ ಕಿಸೆಯಿಂದ ಹಣವನ್ನು ಖರ್ಚು ಮಾಡದಿರಲೆಂಬ ಉದ್ದೇಶಕ್ಕಾಗಿ ಕರ್ನಾಟಕ ಗೃಹರಕ್ಷಕರ ನಿಯಮಾವಳಿಗಳ ನಿಯಮ 18ರ ಅವಕಾಶದ ಮೇರೆಗೆ ಈ ಭತ್ಯೆಯನ್ನು ನೀಡಲಾಗುತ್ತಿದೆ. ಭತ್ಯೆಯನ್ನು ಅವರ ಜೀವನಕ್ಕೆ ಆಧಾರವಾಗಲೆಂಬ ದೃಷ್ಟಿಯಿಂದಲ್ಲ.

ಇ) ಹಾಲಿ ನೀಡಲಾಗುತ್ತಿರುವ ಕರ್ತವ್ಯ: ತರಬೇತಿ ಭತ್ಯೆಯ ದರವನ್ನು ರೂ. 70-00 ರಿಂದ ರೂ. 110-00 ಕ್ಕೆ ಹೆಚ್ಚಿಸುವ ಪ್ರಸ್ತಾವನೆಯನ್ನು ಮಿತವ್ಯಯ ಆದೇಶದ ಹಿನ್ನೆಲೆಯಲ್ಲಿ ಮುಂದೂಡಲಾಗಿದೆ.